**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.**

ಸಿ.ಸಿ.ನಂ.3858/2023

ಪಿಡಬ್ಲ್ಯೂ -08

ಸಿಡಬ್ಲ್ಯೂ-08

ಸಾಕ್ಷಿದಾರನ ಹೆಸರುಃ- ಅಬ್ದುಲ್ ಖಾದರ ಜೀಲಾನಿ

ತಂದೆಯ ಹೆಸರು:- ಲೇಟ್ ಸಮೀರವುಲ್ಲಾ

ವಯಸ್ಸು:- 55 ವರ್ಷ

ಉದ್ಯೋಗ:- ಎ.ಎಸ್.ಐ

ವಾಸಕೊ:- ಕುಣಿಗಲ್ ಪೊ. ಠಾಣೆ

**ಸಾಕ್ಷಿಗೆ ದಿಃ 01.06.2026 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

07.08.2021 ರಿಂದ 17.02.2025 ನಾನು ಹು.ದುರ್ಗ ಪೋ ಠಾ. ಯಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 21.10.2022 ರಂದು ಸಂಜೆ 6.15 ಗಂಟೆಯ ಸಮಯದಲ್ಲಿ ನ್ಯಾಯಾಲಯದ ಕೋರ್ಟ್ ಪಿ.ಸಿ ಅವರು ಪಿ.ಸಿ.ಆರ್ 50/2022ರ ದೂರನ್ನು ನೀಡಿದ್ದನ್ನು ಪಡೆದು ಠಾಣಾ ಮೊ. ನಂ. 162/2022 ರಂತೆ ಕಲಂ 323, 324, 326, 504, 506 ರೆಡ್ ವಿತ್ 34 ಐ.ಪಿ.ಸಿ ಅಡಿಯಲ್ಲಿ ಪ್ರಕರಣದಾಖಲಿಸಿಕೊಂಡು ಮೂಲ ಎಫ್.ಐ.ಆರ್ ಅನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತೇನೆ. ದಿಃ 22.10.2022 ರಂದು ಸ್ಥಳ ಪಂಚನಾಮೆಗೆ ಹೋಗಿ ಚಾಸಾ 4 ಮತ್ತು 5 ಅವರ ಸಮಕ್ಷಮ ಪಂಚನಾಮೆ ಮಾಡಿರುತ್ತೇನೆ. ಪಂಚನಾಮೆಯನ್ನು ಬೆಳಿಗ್ಗೆ 10 ರಿಂದ 11.30 ಗಂಟೆಯ ವರೆಗೆ ಜರುಗಿಸಿ ಪಂಚರ ಸಮಕ್ಷಮ ಚಾಸಾ 1 ಹಾಜರುಪಡಿಸಿದ 3 ಅಡಿ ಉದ್ದದ 1 ನೀಲಗಿರಿ ದೊಣ್ಣೆ ಮತ್ತು 2ವರೆ ಅಡಿ ಉದ್ದದ ಬಿದುರು ದೊಣ್ಣೆಯನ್ನು ಜಪ್ತು ಮಾಡಿಕೊಂಡಿರುತ್ತೇನೆ. ಸದರಿ ಮು. ಮಾ. ಪಿಎಫ್ 178/2022 ರಲ್ಲಿ ನಮೂದಿಸಿ ನಿವೇದಿಸಿಕೊಂಡಿರುತ್ತೇನೆ. ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ 9 ಅವರಿಗೆ ನೀಡಿರುತ್ತೇನೆ.

ಎಫ್.ಐ. ಆರ್ ಅನ್ನು ನಿ.ಪಿ 6 ಎಂದು ಸಹಿ ನಿ.ಪಿ 6(ಎ) ಎಂದು ಗುರುತಿಸಲಾಯಿತು. ಪಂಚನಾಮೆಯಲ್ಲಿರುವ ಸಹಿ ಅನ್ನು ನಿ.ಪಿ 2(ಡಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಟಿ.ಜಿ.ಟಿ. ವಕೀಲರಿಂದಃ**

ದೂರಿನಲ್ಲಿ ಚಪ್ಪಡಿ ಕಲ್ಲಿನ ಮೇಲೆ ಕಾರು ಹೋಗಿರುವ ಬಗ್ಗೆ ಬರೆದಿದ್ದು ನಾನು ಅದನ್ನು ಪರಿಶೀಲನೆ ಮಾಡಿ ನಂತರ ಮಹಜರನ್ನು ಬರೆದಿರುತ್ತೇನೆ. ನ್ಯಾಯಾಲಯಕ್ಕೆ ನೀಡಿರುವ ಮಹಜರ ಚಪ್ಪಡಿ ಕಲ್ಲಿನ ಮೇಲೆ ಮಾಡಿರುವ ಮಹಜರ ಆಗಿರುತ್ತದೆ ಎಂದರೆ ಸಾಕ್ಷಿ ಚಾಸಾ 1 ಅವರ ಮನೆಯ ಹಾಲ್ ನಲ್ಲಿ ಮಹಜರ ಮಾಡಿರುತ್ತೇನೆ ಎಂದು ಹೇಳುತ್ತಾರೆ. ಸದರಿ ಸ್ಥಳದ ಚಕ್ಕುಬಂದಿಯನ್ನು ಮಹಜರನಲ್ಲಿ ನಮೂದು ಮಾಡಿಲ್ಲವೆಂದರೆ ಸಾಕ್ಷಿ ಮನೆಯ ಚಕ್ಕುಬಂದಿ ನಮೂದು ಮಾಡಿದ್ದೇನೆ ಎಂದು ಹೇಳುತ್ತಾರೆ.

ನಾನು ಮಹಜರ ಮಾಡುವ ಮೊದಲು ಪಂಚರಿಗೆ ನೋಟಿಸ್ ನೀಡಿರುತ್ತೇನೆ. ಮಹಜರ ಮಾಡಿದ ದಿನವೇ ನೋಟಿಸ್ ನೀಡಿರುತ್ತೇನೆ. ಪಂಚರಿಗೆ ಮಹಜರಿಗೆ ಬರುವಂತೆ 9 ಗಂಟೆಗೆ ನೋಟಿಸ್ ನೀಡಿರುತ್ತೇನೆ. ನೋಟಿಸ್ ನಲ್ಲಿ ದಿನಾಂಕವನ್ನು ಬೇರೆ ಶಾಹಿಯಿಂದ ನಮೂದು ಇದೆ ಎಂದರೆ ಸರಿಯಲ್ಲ. ಠಾಣೆಯಲ್ಲಿ ಪಂಚರಿಗೆ ನೋಟಿಸ್ ನೀಡಿರುತ್ತೇನೆ. ಚಾಸಾ 4 ಮತ್ತು 5 ಅವರು ಚಾಸಾ 1 ಅವರೇ ಠಾಣೆಗೆ ಕರದುಕೊಂಡು ಬಂದಿರುತ್ತಾರೆ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಮಹಜರಿಗೆ ಪೋಲಿಸರು ಬಂದಾಗ ಸಾಕಷ್ಟು ಜನ ಸೇರುತ್ತಾರೆ ಎಂದರೆ ಸರಿ. ನಾನು ಹೋದಾಗ ಯಾರು ಜನ ಸೇರಿರಲಿಲ್ಲವೆಂದು ಹೇಳುತ್ತಾರೆ.

ಠಾಣೆಯಲ್ಲಿ ಪಂಚರ ಒಂದೇ ಸಹಿಯನ್ನು ಪಡೆದಿರುತ್ತೇನೆ. ಮಹಜರನಲ್ಲಿ ಎಲ್ಲಿಯೂ ಸಹ ಪಂಚರನ್ನು ಕರೆಯಿಸಿ ನೋಟಿಸ್ ನೀಡಿ ಸಹಿ ಪಡೆದ ಬಗ್ಗೆ ನಮೂದು ಇಲ್ಲವೆಂದರೆ ಸಾಕ್ಷಿ ನಮೂದು ಮಾಡುವುದಿಲ್ಲವೆಂದು ಹೇಳುತ್ತಾರೆ. ನಾನು ಯಾವುದೇ ಸ್ಥಳಕ್ಕೆ ಹೋಗಿಲ್ಲ ಠಾಣೆಯಲ್ಲಿಯೇ ಮಹಜರನ್ನು ಸೃಷ್ಟಿ ಮಾಡಿ ಸಹಿ ಪಡೆದಿರುತ್ತೇನೆ ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಮು. ಮಾ. ಗಳನ್ನು ಸ್ಥಳದಲ್ಲಿ ವಶಪಡಿಸಿಕೊಂಡಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಮು. ಮಾ. ಗಳಂತಹ ವಸ್ತುಗಳು ಹಳ್ಳಿಗಳಲ್ಲಿ ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿಯಲ್ಲ.

ನ್ಯಾಯಾಲಯದ ಮುಂದೆ ಇರುವ ಮು. ಮಾ. ಗಳ ಮೇಲೆ ಶಿಪ್ಪೆ ಇಲ್ಲದೆ ಇರುವ ಕಾರಣ ಯಾವ ಜಾತಿಯ ದೊಣ್ಣೆಯಂದು ಗೊತ್ತಾಗುವುದಿಲ್ಲವೆಂದರೆ ಸರಿಯಲ್ಲ. ನಾನು ಯಾವುದೇ ರೀತಿಯ ದೊಣ್ಣೆಗಳನ್ನು ವಶಪಡಿಸಿಕೊಂಡಿಲ್ಲ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲದಿಲ್ಲರೂ ಸಹ ಠಾಣೆಯ ಅಂಕಿ ಸಂಖ್ಯೆ ಗಳ ಲೆಕ್ಕಕ್ಕಾಗಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಎಫ್.ಐ.ಆರ್ ಕಾಲನ ನಂ 3(ಸಿ) ನಲ್ಲಿ ದೂರನ್ನು ತಡವಾಗಿ ನೀಡಿದ ಬಗ್ಗೆ ನಮೂದು ಇರುವುದಿಲ್ಲವೆಂದರೆ ಸಾಕ್ಷಿ ಖಾಸಗಿ ದೂರು ಇದ್ದ ಕಾರಣ ನಮೂದು ಮಾಡಿಲ್ಲವೆಂದು ಹೇಳುತ್ತಾರೆ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.